'ನಾವು ಈಗ ಬಾಳದ ಬಸ್ಸಿಗೆ ಹತ್ತಿಸಿದರೆ ನಿಮಗೆ ಹೋಗಲಿಕ್ಕೆ ಗೊತ್ತಾದೀತೋ?'

'ಹೂಂ'.

'ನಿಮಗೊಬ್ಬ ಮಗ ಇದ್ದ ಅಲ್ವಾ? ನಾವು ನಿಮ್ಮ ಬಗ್ಗೆ ವಿಚಾರಿಸುವಾಗ ಯಾರೋ ಹೇಳಿದರು?'

'ಹೌದು'.

'ಅವನ ಹೆಸರು?'

'ರೋಯಿತ'.

'ಓ, ರೋಹಿತನಾ? ಈಗ ಅವನಿಗೆ ಇಪ್ಪತ್ತಮೂರು ಇಪ್ಪತ್ತನಾಲ್ಕು ವರ್ಷ ಅಗಿರಬಹುದು ಅಲ್ವಾ?'

'ಹೌದು'.

'ಅವನು ನಿಮ್ಮನ್ನು ನೋಡಲು ಒಮ್ಮೆಯಾದರೂ ಬಂದಿದ್ದನಾ?:

'ಇಲ್ಲ'.

* * *

ಇದಾದ ಒಂದು ತಿಂಗಳ ನಂತರ ರಮಾನಂದ ಸರಳಾಯರು ಮತ್ತು ಗೆಳೆಯರು ಬೈಕುಗಳಲ್ಲಿ ಬಾಳಕ್ಕೆ ಹೋಗಿ ಇಸ್ತಿರಿ ಅಪ್ಪಣ್ಣನ ಕುಟುಂಬದ ಬಗ್ಗೆ ಮತ್ತು ಅವನ ಮಗನ ಬಗ್ಗೆ ವಿಚಾರಿಸಿದರು. 'ಅಪ್ಪಣ್ಣನ ಹೆಂಡತಿ ಆಮೇಲೆ ಬಹುಶಃ ಮತ್ತೊಂದು ಮದುವೆಯಾಗಿ ಕಾಟಿಪಳ್ಳಕ್ಕೆ ಹೋಗಿರ ಬೇಕು; ಮದುವೆಯೇ ಆದಳೆಂದು ಖಂಡಿತವಾಗಿ ನಾವು ಹೇಳಲಾರೆವು. ಯಾರೋ ಊಹಿಸಿ ಹೇಳಿದ ಮಾತೂ ಇರಬಹುದು. ಅಂತೂ ಅಪ್ಪ, ಅಮ್ಮನ ಮನೆಯಿಂದ ಹೊರಟುಹೋಗಿದ್ದಳು; ಕಾಟಿಪಳ್ಳದಲ್ಲಿ ಇದ್ದದ್ದು ಹೌದು' ಎಂಬ ಮಾಹಿತಿ ಸಿಕ್ಕಿತು. ಅವಳ ಮಗ ರೋಹಿತ ಹದಿನೆಂಟು ಇಪ್ಪತ್ತು ವರ್ಷವಾಗುವವರೆಗೆ ಅಜ್ಜನ ಮನೆಯಲ್ಲಿಯೇ ಇದ್ದು ಆಮೇಲೆ ಬೊಂಬಾಯಿಗೆ ಹೋದವನದು ಸುದ್ದಿ ಇಲ್ಲ ಎಂದೂ ಮಾಹಿತಿ ನೀಡಿದವರು ಹೇಳಿದರು.

ಇಸ್ತಿರಿ ಅಪ್ಪಣ್ಣ, ಹೆಂಡತಿಯನ್ನು ಹುಡುಕಿಕೊಂಡು ಬಂದವನು ಎಲ್ಲಿಗೆ ಹೋದ ಎನ್ನುವುದನ್ನು ಹೇಳಬಲ್ಲವರು ಅಲ್ಲಿ ಯಾರೂ ಇರಲಿಲ್ಲ. ಹಾಗಾಗಿ ಅವನು ದೇಶಾಂತರ ಹೋದ ಎಂದು ನಾವು ಊಹಿಸಬಹುದಷ್ಟೆ. ಮನುಷ್ಯ ಮಾತೇ ಆಡದಿದ್ದರೆ ಅವನ ಮನಸ್ಸಿನೊಳಗೆ ನಡೆಯುವ ವಿಚಾರಗಳು, ಅವನ ಒಲವು ನಿಲುವುಗಳು ಇತರರಿಗೆ ಗೊತ್ತಾಗುವುದಾದರೂ ಹೇಗೆ? ಇಸ್ತಿರಿ ಅಪ್ಪಣ್ಣನು ಧರ್ಮ, ದೇವರು ಎಂದೆಲ್ಲ ಹಚ್ಚಿಕೊಂಡವನಾಗಿರಲಿಲ್ಲ; ಹಾಗಾಗಿ ಸನ್ಯಾಸಿಯಾದನೆಂದು ಹೇಳುವಂತಿಲ್ಲ. ಇಸ್ತ್ರಿಯೇ ಅವನ ಧರ್ಮವಾಗಿತ್ತು; ಅವನ ಒಲವು ನಿಲುವು ಎಲ್ಲವೂ ಅದೇ ಆಗಿತ್ತು. ಅವನು ಎಲ್ಲಿಗಾದರೂ ಹೋಗಿ ಹೋಟೆಲುಗಳಲ್ಲಿ ಸಪ್ಲಯರ್ ಆಗಿಯೋ, ಕ್ಲೀನರನಾಗಿಯೋ ಸೇರಿಕೊಂಡನೆಂದು ಹೇಳ ಬಹುದು. ಆದರೆ ಮಾಕಾಲ ಪಟ್ಟಣದಲ್ಲಿ ಕೋಟಿಗಟ್ಟಲೆ ಬೆಲೆಬಾಳುವ ಆಸ್ತಿಯನ್ನು ಹೊಂದಿದ್ದವನೊಬ್ಬ ಹೀಗೆ ಅನಾಥನಂತೆ ಬದುಕುವುದಕ್ಕೆ ಏನರ್ಥವಿದೆ? ಅಂತೂ ಅವನು ಮಾಕಾಲ ಪಟ್ಟಣದಲ್ಲಿ ಉಳಿದುಹೋದ ತನ್ನ ಇಸ್ತ್ರಿ ಪೆಟ್ಟಿಗೆಯನ್ನು ಆಮೇಲೆ ಮುಟ್ಟಲಿಲ್ಲ ಎನ್ನುವುದು ನಿಜ; ತನ್ನ ಮನೆಯ ಬಳಿ ಆಮೇಲೆ ಸುಳಿಯಲಿಲ್ಲ ಎನ್ನುವುದು ಕೂಡ ನಿಜ.

ಅವನ ಮೊಮ್ಮಗ ಎಂದು ಹೇಳಿಕೊಂಡು ಅವನ ಆಸ್ತಿಯನ್ನು ಮಾರಾಟ ಮಾಡಿ ಶ್ರೀಮಂತನಾದ ಕಾಟಿಪಳ್ಳ ಶ್ರೀನಿವಾಸನು ಒದಗಿಸಿದ ವಂಶವೃಕ್ಷದಲ್ಲಿ ಬಾರಕಳಿಯ ಅಪ್ಪಣ್ಣ- ಉಮಿಲು (ಹೆಂಡತಿ); ಮಗ – ಸದಾನಂದ, ಸೊಸೆ- ನಿರ್ಮಲಾ; ಮೊಮ್ಮಗ ಶ್ರೀನಿವಾಸ ಎಂದಿತ್ತು. ಅಪ್ಪಣ್ಣನ ಮಗನೆನ್ನಲಾದ ಸದಾನಂದನ ಜನ್ಮದಿನವು ಇಸ್ತಿರಿ ಅಪ್ಪಣ್ಣ ಜೈಲುಪಾಲಾದ ಮೂರು ವರ್ಷಗಳ ನಂತರದ ಒಂದು ದಿನವಾಗಿತ್ತು. ಹಾಗಾಗಿ ಹೆಚ್ಚು ತನಿಖೆ ಮಾಡಲು ಹೋದರೆ ಸದಾನಂದ ಎಂಬವನು ಅಪ್ಪಣ್ಣನಿಗೆ ಹುಟ್ಟಿದ ಮಗನಲ್ಲ; ಹಾಗಾಗಿ ಕಾಟಿಪಳ್ಳ ಶ್ರೀನಿವಾಸನು ಅಪ್ಪಣ್ಣನ ಮೊಮ್ಮಗನಲ್ಲ ಎನ್ನುವುದನ್ನು ಯಾರು ಬೇಕಾದರೂ ಹೇಳಬಹುದಿತ್ತು.

ಆದರೆ ಯಾರೂ ಆ ಪ್ರಶ್ನೆಯನ್ನು ಎತ್ತಲಿಲ್ಲ. 'ಅನ್ನ ಹಳಸಿತ್ತು, ನಾಯಿ ಹಸಿದಿತ್ತು' ಎನ್ನುವ ಗಾದೆಯಂತೆ ಈ ಜಾಗವನ್ನು ಮಾರಾಟ ಮಾಡಿ ತನ್ನ ಮತ್ತು ತನ್ನ ಮುಂದಿನ ಪೀಳಿಗೆಯೆಲ್ಲ ಕುಳಿತು ಉಣ್ಣಬಹುದು ಎನ್ನುವ ಯೋಜನೆಯನ್ನು ಕಾಟಿಪಳ್ಳ ಶ್ರೀನಿವಾಸ ಹೆಣೆದಿದ್ದ; ಅದನ್ನು ಕೊಳ್ಳುವ ಬಗೆ ಹೇಗೆ ಕಾದಿದ್ದ ಕೋಟ್ಯಧಿಪತಿಗಳು ಮತ್ತು ರಿಯಲ್ ಎಸ್ಟೇಟ್ ಏಜೆಂಟರು ಇಂತಹ ಒಬ್ಬ ಹಕ್ಕುದಾರ ಹುಟ್ಟಿಕೊಳ್ಳುವುದನ್ನೇ ನಿರೀಕ್ಷಿಸಿಕೊಂಡಿದ್ದರು. ●